**ಅಸಲು ದಾವ ಸಂಖ್ಯೆಃ 1313/2022**

**ಪಿ.ಡಬ್ಲೂ -1**

**ದಿಃ 01-07-2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ SPK ರವರಿಂದಃ-**

1. ನಿಪಿ-1 ಮೃತ್ಯು ಪತ್ರದಲ್ಲಿ ನನ್ನ ತಂದೆ ಅಜಿತ ಶೇರಿ ರವರಿಗೆ ಸೇರಿದ ಜಾಗವನ್ನು ಮಾರಾಟ ಮಾಡಬೇಕಾದರೆ ಅವರು ಪ್ರತಿವಾದಿಗೆ ಕೇಳಬೇಕೇಂದು ಅಥವಾ ಪ್ರತಿವಾದಿಯು ತನಗೆ ಸೇರಿದ ಜಾಗವನ್ನು ಮಾರಾಟ ಮಾಡಬೇಕಾದರೆ ನಮ್ಮ ತಂದೆಗೆ ಕೇಳಬೇಕೆಂದು ಯಾವುದೇ ಶರತ್ತು ಇರುವುದಿಲ್ಲ ಎಂದರೆ ಸರಿ. ಸಿಟಿಎಸ್ ನಂಬರ 4905/24/A3 ರ ಆಸ್ತಿಯು ಸದರಿ ಮೃತ್ಯು ಪತ್ರದ ಪ್ರಕಾರ ಪ್ರತಿವಾದಿಗೆ ಸೇರಿದ ಆಸ್ತಿ ಎಂದರೆ ಸರಿ. ಸಿಟಿಎಸ್ ನಂಬರ 4905/24/A2 ರ ಆಸ್ತಿ ಮೃತ್ಯು ಪತ್ರದ ಮೂಲಕ ನನ್ನ ತಂದೆಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುಕವರೆದು ಸದರಿ ಆಸ್ತಿಯು ಇಬ್ಬರಿಗೂ ಸೇರಿದ common ಪ್ರಾಪರ್ಟಿ ಎಂದು ನುಡಿಯುತ್ತಾರೆ. ಸಿಟಿಎಸ್ ನಂಬರ 4905/24/A1 ರ ಆಸ್ತಿಯು ನಮಗೆ ಸೇರಿದ ಆಸ್ತಿ ಎಂದರೆ ಸರಿ. ಸದರಿ ಸಿಟಿಎಸ್ ನಂಬರ 4905/24/A1 ರ ಆಸ್ತಿಯ ಸಿಟಿಎಸ್ ರೆಕಾರ್ಡನಲ್ಲಿ ನನ್ನ ತಂದೆಯ ಹೆಸರು ಇತ್ತು ಹಾಗೂ ಅವರ ನಂತರ ನನ್ನ ಹಾಗೂ ಇತರೆ ವಾದಿಯರ ಹೆಸರು ನಮೂದಾಗಿರುತ್ತದೆ ಎಂದರೆ ಸರಿ. ಅದೇ ರೀತಿ ಸಿಟಿಎಸ್ ನಂಬರ 4905/24/A3 ರ ಆಸ್ತಿಯ ಸಿಟಿ ಸರ್ವೆ ದಾಖಲೆಯಲ್ಲಿ ಪ್ರತಿವಾದಿಯ ಹೆಸರು ಬಂದಿರುತ್ತದೆ ಎಂದರೆ ಸರಿ. ಆ ರೀತಿ ವಿಭಜನೆ ಆದ ನಂತರ ನಮ್ಮ ಆಸ್ತಿಯ ಮೇಲೆ ಪ್ರತಿವಾದಿಗೆ ಹಾಗೂ ಪ್ರತಿವಾದಿಯ ಆಸ್ತಿಯ ಮೇಲೆ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ.

2. ನನ್ನ ವಾದಪತ್ರದಲ್ಲಿ ಹಾಗೂ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯು ಪೂರ್ಣ ಸಿಟಿಎಸ್ ನಂಬರ 4905/24/A ರ ಆಸ್ತಿಯ ಮೇಲೆ ಅವರೊಬ್ಬರೇ ಹಕ್ಕು

ಚಲಾಯಿಸುತ್ತಿದ್ದಾರೆ ಎಂದು ಯಾವ ಆಧಾರದ ಮೇಲೆ ಬರೆದಿರುತ್ತೇನೆ ಎಂದರೆ ಸಾಕ್ಷಿಯು ಪ್ರತಿವಾದಿ ಮೇಲೆ ಹೇಳಿದ ನಿಪಿ-1 ರ ಮೃತ್ಯಪತ್ರ ಪ್ರಶ್ನಿಸಿ ಆ ರೀತಿ ಯಾವುದೇ ಮೃತ್ಯಪತ್ರ ಆಗಿರುವುದಿಲ್ಲ ಎಂದು ಹೇಳಿ ಒಂದು ದಾವೆ ಹೂಡಿ ಸದರಿ ದಾವೆ 18 ವರ್ಷಗಳಿಂದ ನಡೆಯುತ್ತಿದೆ ಹಾಗೂ ಆ ದಾವೆಯಲ್ಲಿ ಪ್ರತಿವಾದಿ ಸುಳ್ಳು ಸಾಕ್ಷ್ಯ ನುಡಿದಿರುತ್ತಾರೆ, ಅದೇ ಆಧಾರದ ಮೇಲೆ ಎಂದು ನುಡಿಯುತ್ತಾರೆ. ಸದರಿ ದಾವೆ ಅಸಲು ದಾವಾ ಸಂಖ್ಯೆ 27/2010 ಹಾಗೂ FDP No. 20/2020 ಆಗಿರುತ್ತದೆ. ಸದರಿ ದಾವೆಯಲ್ಲಿ ಸಿಟಿಎಸ್ ನಂಬರ 4905/24/A ರ ಪೂರ್ಣ ಮಾಲೀಕ ಪ್ರತಿವಾದಿ ಒಬ್ಬರೇ ಎಂದು ಅವರು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 27/2010 ರ ದಾವೆಯ ಕುರಿತು ನಾನು ಈ ದಾವೆಯಲ್ಲಿ ಎಲ್ಲಿಯೂ ಸಹ ಉಲ್ಲೇಖ ಮಾಡಿರುವುದಿಲ್ಲ ಎಂದರೆ ಸರಿ.

3. ನಿಪಿ-1 ಮೃತ್ಯು ಪತ್ರದ ಪ್ರಕಾರ ಸಿಟಿಎಸ್ ನಂಬರ 4905/24/A2 ರಲ್ಲಿ ಬಾವಿ, ಮೆಟ್ಟಿಲು ಹಾಗೂ ಸಮಾಯಿಕ ಪ್ಯಾಸೇಜ್ ಇವೆಲ್ಲವೂ ನಮ್ಮ ತಂದೆ ಹಾಗೂ ಪ್ರತಿವಾದಿಗೆ ಇಬ್ಬರಿಗೂ ಸೇರಿದ್ದು ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಸಿಟಿಎಸ್ ನಂಬರ 4905/24/A ರ ಆಸ್ತಿಯು ಹಿಸ್ಸೆ ಆಗುವ ಮೊದಲು ಅಲ್ಲಿ ಸುಮಾರು 45 ವರ್ಷಗಳ ಹಳೆಯ ಒಂದು ಮನೆ ಇತ್ತು ಎಂದರೆ ಸಾಕ್ಷಿ ಎರಡು ಮನೆಗಳು ಇದ್ದವು ಎಂದು ನುಡಿಯುತ್ತಾರೆ. ಸದರಿ ಎರಡೂ ಮನೆಗಳು ಇದ್ದ ಜಾಗವು ವಿಭಜಣೆ ಆದ ನಂತರ ಪ್ರತಿವಾದಿಯ ಪಾಲಿಗೆ ಬಂದಿರುತ್ತದೆ ಎಂದರೆ ಸಾಕ್ಷಿ ಒಂದು ಮನೆ ಪ್ರತಿವಾದಿಯ ಪಾಲಿಗೆ ಹಾಗೂ ಮತ್ತೊಂದು ಮನೆ ಇರುವ ಜಾಗ ವಾದಿಯರಿಗೆ ಪಾಲಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಪಾಲಿಗೆ ಬಂದ ಸಿಟಿಎಸ್

ನಂಬರ 4905/24/A1 ರಲ್ಲಿ ಈಗ ನಾವು ಹೊಸ ಮನೆ ಕಟ್ಟಿಕೊಂಡು ಇರುತ್ತೇವೆ ಎಂದರೆ ಸಾಕ್ಷಿ ಹಳೆ ಮನೆ ಜಾಗ ಬಿಟ್ಟು ಖಾಲಿ ಜಾಗ ಇದ್ದ ಕಡೆ ಹೊಸ ಮನೆ ಕಟ್ಟಿಕೊಂಡು ಇರುವುದಾಗಿ ನುಡಿಯುತ್ತಾರೆ. ಸದರಿ ಹೊಸ ಮನೆಯನ್ನು ಸುಮಾರು 12-13 ವರ್ಷಗಳ ಹಿಂದೆ ಕಟ್ಟಲಾಗಿದೆ ಎಂದರೆ ಸಾಕ್ಷಿ ಸುಮಾರು 16 ವರ್ಷಗಳ ಹಿಂದೆ ಕಟ್ಟಲಾಗಿದೆ ಎಂದು ನುಡಿಯುತ್ತಾರೆ. ಸದರಿ ಹೊಸ ಮನೆಗೆ ರತ್ನಾತ್ರೆಯ ಎಂದು ಹೆಸರು ಇಡಲಾಗಿದೆ ಎಂದರೆ ಸರಿ. ನಾವು ಹೊಸ ಮನೆ ಕಟ್ಟುವ ಮೊದಲು ಸದರಿ ಜಾಗ ಖಾಲಿ ಜಾಗ ಆಗಿತ್ತು ಎಂದರೆ ಸರಿ. ಪ್ರತಿವಾದಿಯ ಜಾಗದಲ್ಲಿ ಇರುವ ಹಳೆಯ ಮನೆ, ನಮ್ಮ ಜಾಗದಲ್ಲಿರುವ ಹಳೆಯ ಮನೆ ಹಾಗೂ ಹೊಸ ಮನೆ ಎಲ್ಲದಕ್ಕೂ ತಾನಾಜಿ ಗಲ್ಲಿ ಮುಖ್ಯ ರಸ್ತೆ ಒಂದೇ ರಸ್ತೆ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿಯ ಮನೆಯಿಂದ ತಾನಾಜಿ ಗಲ್ಲಿ ಮುಖ್ಯ ರಸ್ತೆಗೆ ದಾರಿ ಇಲ್ಲ ಎಂದು ನುಡಿಯುತ್ತಾರೆ. ನಮ್ಮ ಅಜ್ಜನ ಕಾಲದಿಂದಲೂ ತಾನಾಜಿ ಗಲ್ಲಿ ಒಂದೇ ನಮ್ಮ ಆಸ್ತಿಗೆ ಮುಖ್ಯರಸ್ತೆ ಆಗಿರುತ್ತದೆ ಎಂದರೆ ಸಾಕ್ಷಿ ಬಂಗಿ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯ ಮನೆಯಿಂದ ತಾನಾಜಿ ಗಲ್ಲಿಗೆ ಬರುವ ರಸ್ತೆಯನ್ನು ನಾವು ಕಟ್ಟಡ ಕಟ್ಟಿ ಮುಚ್ಚಿರುತ್ತೇವೆ ಎಂದರೆ ಸಾಕ್ಷಿ ಸದರಿ ಜಾಗ ತನಗೆ ಸೇರಿದ ಓಪನ ಪ್ಯಾಸೇಜ ಆದ ಕಾರಣ ಅಲ್ಲಿ ಮನೆ ಕಟ್ಟಿದ ನಂತರ ಸದರಿ ರಸ್ತೆ ಮುಚ್ಚಿರುತ್ತದೆ ಎಂದು ನುಡಿಯುತ್ತಾರೆ. ಆ ರೀತಿ ರಸ್ತೆ ಮುಚ್ಚಿ ಹೋಗಿರುವ ಕಾರಣ ಪ್ರತಿವಾದಿ ತಾನಾಜಿ ಗಲ್ಲಿಗೆ ಬರಬೇಕಾದರೆ ಹೇಗೆ ಬರುತ್ತಾರೆ ಎಂದರೆ ಸಾಕ್ಷಿ ಪ್ರತಿವಾದಿಯ ಮನೆಯ ಹಿಂದಿನಿಂದ ತಾನಾಜಿ ಗಲ್ಲಿಗೆ ಬರುತ್ತಾರೆ ಎಂದು ನುಡಿಯುತ್ತಾರೆ. ನಾವು common ಪ್ಯಾಸೇಜ ಆದ ಸಿಟಿಎಸ್ ನಂಬರ 4905/24/A1 ನ್ನು ಮುಚ್ಚಿ ಹಾಕಿರುವ ಕಾರಣ ಪ್ರತಿವಾದಿಯು ಬಂಗಿ ಬೋಳ ದಾರಿಯಿಂದ ಓಡಾಡುವ ಪ್ರಸಂಗ ಬಂದಿರುತ್ತದೆ ಎಂದರೆ ಸರಿಯಲ್ಲ. ಸಿಟಿಎಸ್ ನಂಬರ 4905/24/A1 ರ common ಪ್ಯಾಸೇಜನ್ನು ನಾವು ಹಾಗೂ ಪ್ರತಿವಾದಿಯರು ಸಮಾಯಿಕವಾಗಿ ಬಳಸಬೇಕೆಂದು

ನಿಪಿ-1 ರ ಮೃತ್ಯು ಪತ್ರದಲ್ಲಿ ನಮ್ಮ ಅಜ್ಜ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಿಟಿ ಸರ್ವೆ ದಾಖಲೆಗಳ ಪ್ರಕಾರ ಸಿಟಿಎಸ್ ನಂಬರ 4905/24/A2 ರ ಜಾಗವು common ಪ್ಯಾಸೇಜ ಆಗಿರುತ್ತದೆ ಎಂದು ನುಡಿಯುತ್ತಾರೆ. ಸಿಟಿಎಸ್ ನಂಬರ 4905/24/A2 ರ common ಪ್ಯಾಸೇಜನ ಚೆಕ್ಕುಬಂದಿ ಹೇಳಬಲ್ಲೆ, ಪೂರ್ವಕ್ಕೆ ಪ್ರತಿವಾದಿಯ ಮನೆ, ಪಶ್ಚಿಮಕ್ಕೆ ನಮ್ಮ ಮನೆ, ದಕ್ಷಿಣಕ್ಕೆ ತಾನಾಜಿ ಗಲ್ಲಿ ರಸ್ತೆ ಹಾಗೂ ಉತ್ತರಕ್ಕೂ ತಾನಾಜಿ ಗಲ್ಲಿ ರಸ್ತೆ ಇರುತ್ತದೆ. ಮೃತ್ಯು ಪತ್ರದ ಪ್ರಕಾರ ಸಿಟಿಎಸ್ ನಂಬರ 4905/24/A2 ರ common ಪ್ಯಾಸೇಜ ಇಬ್ಬರಿಗೂ ಸಹ ತಾನಾಜಿ ಗಲ್ಲಿ ಮುಖ್ಯ ರಸ್ತೆಗೆ ಬರುವ ಸಲುವಾಗಿ ಉಪಯೋಗಿಸಲು ಬಳಸಬೇಕೆಂದು ಬರೆಯಲಾಗಿದೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**